# ಆಹಾ ಸುದ್ದಿ!

★ ಸಸಿತೋಟ



ಪುಟ್ಟ ರಾಷ್ಟ್ರ ಮಾಲ್ಟಾದಲ್ಲಿ ಇಟಲಿಯ ಕೆಲವರು ಗೋಡೆಯ ಮೇಲೆ ನರ್ತಿಸುವ ಯೋಜನೆ ಶುರು ಮಾಡಿದ್ದಾರಂತೆ. ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಗೋಡೆ ಹತ್ತುತ್ತ ತಮ್ಮ ಕೌಶಲ್ಯ ಪ್ರದರ್ಶನ ನಡೆಸುವುದು ಈ ನರ್ತನದ ವೈಖರಿ. ಕುಣಿಯಲಾರದವನಿಗೆ ಅಂಗಳ ಡೊಂಕು ಎಂಬ ಗಾದೆ ಇಲ್ಲಿ ಹೇಗೆ ಹೇಗೋ ಬಾಗಿ ಬಳುಕಿ ಇನ್ನೊಂದು ರೂಪ ತಾಳಬಹುದು.



ಬೆಲಾರಸ್‌ನಲ್ಲಿ ಕಚೇರಿಗಳಲ್ಲಿ ಹಲವರು ನಗ್ನರಾಗಿ ಕೆಲಸ ಮಾಡುವ ಪದ್ಧತಿ ಶುರು ಮಾಡಿದ್ದಾರಂತೆ. ಇದಕ್ಕೆಲ್ಲ ಕಾರಣ ಅಲ್ಲಿಯ ಅಧ್ಯಕ್ಷರ ಭಾಷಣವಂತೆ. ಜಾಸ್ತಿ ಕೆಲಸ ಮಾಡಿ ಎಂದು ಹೇಳುವ ಭರದಲ್ಲಿ ‘ಅವಶ್ಯಕತೆ ಇದ್ದರೆ ಉಡುಪು ಕಳಚಿ, ಬೆವರು ಸುರಿಸಿ ಕೆಲಸ ಮಾಡಿ’ ಎಂದು ಕಾವ್ಯಮಯವಾಗಿ ಹೇಳಿದ್ದೇ ತಡ, ಕೇಳಿದ ಭಾಷಣವನ್ನು ಉದ್ಯೋಗಿಗಳು ಪ್ರಾಯೋಗಿಕವಾಗಿ ಇಳಿಸಿಬಿಟ್ಟರಂತೆ. ಸದ್ಯ ಅಧ್ಯಕ್ಷರು ಹುರಿದುಂಬಿಸಿದ್ದು ಸಾಫ್ಟ್‌ವೇರ್ ಉದ್ಯೋಗಿಗಳಿಗೆ. ಇಲ್ಲದಿದ್ದರೆ ಬೀದಿಯ ತುಂಬ ಕಣ್ಣುಂಬುವ ನೋಟವೇ ತುಂಬಿರುತ್ತಿತ್ತು.

ಹಿಮಾಚಲಪ್ರದೇಶದ ಹಮೀರ್‌ಪುರದಲ್ಲಿ ಗಂಡನೊಬ್ಬ ತನ್ನ ಪ್ರೀತಿಪಾತ್ರ ಹೆಂಡತಿಗಾಗಿ ಇಡೀ ಸಿನಿಮಾ ಹಾಲ್ ಬುಕ್ ಮಾಡಿದ್ದನಂತೆ. ‘ಸುಲ್ತಾನ್’ ಸಿನಿಮಾ ವೀಕ್ಷಿಸಲು ಸಲ್ಮಾನ್ ಖಾನ್ ಅಭಿಮಾನಿ ಗೀತಾಂಜಲಿಗಾಗಿ ಪತಿ ಮುಸಾಫಿರ್ 120 ಸೀಟುಗಳ ಹಾಲ್ ಬುಕ್ ಮಾಡಿದ್ದನಂತೆ. ಹಾಲ್‌ನ ಮಾಲೀಕನಿಗೇನೂ ನಿರಾಸೆಯಾಗಲಿಲ್ಲ, ಆದರೆ ನಿರಾಸೆಯಾಗಿದ್ದು 120X... ಎಂದು ಲೆಕ್ಕ ಹಾಕಿದ್ದ ಪಾಪ್ ಕಾರ್ನ್, ಮೃದು ಪಾನೀಯ ವ್ಯಾಪಾರಿಗಳಿಗೆ.

ಉಕ್ರೇನ್‌ನಲ್ಲಿ ವರ್ಷಕ್ಕೊಮ್ಮೆ ನಡೆಯುವ ಹಬ್ಬದಲ್ಲಿ ವಿವಾಹಿತ ದಂಪತಿ, ಮದುವೆಯಾಗ ಬಯಸುವ ಜೋಡಿ ಒಟ್ಟಿಗೆ ಬೆಂಕಿಯ ಮೇಲಿನಿಂದ ಜಿಗಿದು ಓಡುವ ಪದ್ಧತಿಯಿದೆಯಂತೆ. ಇದು ಮೌಢ್ಯವೋ, ನಂಬಿಕೆಯೋ ಅವರವರಿಗೆ ಬಿಟ್ಟದ್ದು ಎಂದರೂ ಕೊನೆಗೆ ನಗ್ನರಾಗಿ ನದಿಯಲ್ಲಿ ಸ್ನಾನ ಮಾಡುವ ಪದ್ಧತಿಗೆ ಆಧುನಿಕ, ವೈಜ್ಞಾನಿಕ ಮನೋಭಾವವೇ ಕಾರಣ ಇರಬಹುದು.



ಅಮೆರಿಕಾದ ನೆವಾಗೋದಲ್ಲಿ ವಿಪರೀತ ಮಾತನಾಡುವ ಗಿಳಿಯೊಂದು ಕೊಲೆಗಾರ್ತಿಯನ್ನು ಹಿಡಿದುಕೊಟ್ಟಿದೆಯಂತೆ. ಗಿಳಿಯ ಮಾಲಕಿಯೇ ತನ್ನ ಗಂಡನನ್ನು ಕೊಂದಿದ್ದು, ಸಾಕ್ಷಿ ಇಲ್ಲದೇ ತಪ್ಪಿಸಿಕೊಳ್ಳಲು ನೋಡಿದಳಂತೆ. ಆದರೆ ಕೊಲೆಯಾದವನ ಪೋಷಕರ ಮುಂದೆ ಆ ಗಿಳಿ ಕೊಲೆಗೆ ಮುನ್ನ ದಂಪತಿ ನಡುವೆ ನಡೆದ ಸಂಭಾಷಣೆ ಪುನರುಚ್ಚರಿಸಿ ನಿಮ್ಮ ಸೊಸೆಯೇ ನಿಮ್ಮ ಮಗನ ಕೊಲೆಗಾರ್ತಿ ಎಂದು ಮೂತಿ ಮಾಡಿತಂತೆ. ಇನ್ನು ಮುಂದೆ ಜಗಳವಾಡುವ ದಂಪತಿ ಗಿಳಿ ಸಾಕುವ ಹಿಮ್ಮತ್ ತೋರಿಸಲಾರರು.

ಲಿಥುವಾನಿಯಾದಲ್ಲಿ ಆಡುಗಳ ಸೌಂದರ್ಯ ಸ್ಪರ್ಧೆ ನಡೆದು ಒಂದು ಆಡು ಮಿಸ್ ಆಡು ಆಗಿ ಆಯ್ಕೆಯಾಗಿಯೂ ಬಿಟ್ಟಿತು. ಆಯೋಜಕರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮಿಸ್ಟರ್ ಹೋತವನ್ನೂ ಆಯ್ಕೆ ಮಾಡಿ ಜೋಡಿ ಮಾಡಲಿದ್ದಾರಂತೆ. ಒಟ್ಟಿನಲ್ಲಿ ಸ್ವಯಂವರ, ಪ್ರೇಮ ವಿವಾಹದ ಆಯ್ಕೆಯನ್ನು ಪಾಪದ ಪ್ರಾಣಿಗಳು ಕಳೆದುಕೊಳ್ಳುತ್ತಿವೆ.

